ಬಾಗೇಪಲ್ಲಿ ಕೃಷಿ ಉತ್ಪನ್ನ ಮಾರುಕಟ್ಟೆ ಕುರಿತು

111(709) ಶ್ರೀ ಎನ್.ಸಂಪಂಗಿ(ಬಾಗೇಪಲ್ಲಿ) : ಮಾನ್ಯ ಕೃಷಿ ಮಾರುಕಟ್ಟೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬಾಗೇಪಲ್ಲಿ ಹಾಗೂ ಗುಡಿಬಂಡೆ ಪಟ್ಟಣಗಳಲ್ಲಿ ಕೃಷಿ ಮಾರುಕಟ್ಟೆಗಳು ಅಸ್ತಿತ್ವದಲ್ಲಿದೆಯೇ; ಇಲ್ಲದಿದ್ದಲ್ಲಿ ಯಾವಾಗ ಪ್ರಾರಂಭಿಸಲಾಗುವುದು?

ಶ್ರೀ ಆರ್. ಬಿ. ತಿಮ್ಮಾಪುರ(ಕೃಷಿ ಮಾರುಕಟ್ಟೆ ರಾಜ್ಯ ಸಚಿವರು) :

ಅ) ಬಾಗೇಪಲ್ಲಿಯಲ್ಲಿ ದಿ: 15- 12- 1977ರಲ್ಲಿ ಉಪಮಾರುಕಟ್ಟೆ ಸ್ಥಾಪಿಸಲಾಗಿದೆ. ಸ್ವಂತ ಪ್ರಾಂಗಣಕ್ಕಾಗಿ 5. 37 ಎಕರೆ ಜಮೀನನ್ನು ಸ್ವಾಧೀನಪಡಿಸಿಕೊಂಡು ಹರಾಜುಕಟ್ಟೆ, ಒಳರಸ್ತೆ, ಚರಂಡಿ, ಶೌಚಾಲಯ, ಬೀದಿ ದೀಪ, ಕುಡಿಯುವ ನೀರು, ನೆರಳಿನ ಗಿಡ ಮುಂತಾದ ಮೂಲಭೂತ ಸೌಲಭ್ಯಗಳನ್ನು ಒದಗಿಸಿ ದಿ: 14- 12- 2000 ದಲ್ಲಿ ಉಪಮಾರುಕಟ್ಟೆ ಪ್ರಾಂಗಣವೆಂದು ನಿರ್ದಿಷ್ಟಪಡಿಸಲಾಗಿದೆ. ಈ ಪ್ರಾಂಗಣಕ್ಕೆ ವ್ಯಾಪಾರ ವಹಿವಾಟನ್ನು ಸ್ಥಳಾಂತರಿಸಲು ಕ್ರಮ ಕೈಗೊಳ್ಳಲಾಗುವುದು.

ಗುಡಿಬಂಡೆಯಲ್ಲಿ ದಿ' 03- 03- 1990 ರಲ್ಲಿ ಉಪಮಾರುಕಟ್ಟೆ ಸ್ಥಾಪಿಸಲಾಗಿದೆ. ಗೌರಿಬಿದನೂರು ಸಮಿತಿಯ ಆರ್ಥಿಕ ಸ್ಥಿತಿ ಗಮನದಲ್ಲಿಟ್ಟು ಸ್ವಂತ ಪ್ರಾಂಗಣಕ್ಕೆ ಜಮೀನು ಪಡೆಯಲು ಕ್ರಮ ಕೈಗೊಳ್ಳಲಾಗುವುದು.

ಶ್ರೀ ಎನ್. ಸಂಪಂಗಿ : ಮಾನ್ಯ ಅಧ್ಯಕ್ಷರೆ, ಮಾನ್ಯ ಮಂತ್ರಿಗಳು ಉತ್ತರವನ್ನು ಒದಗಿಸಿದ್ದಾರೆ. ಈಗ ರೈತರಿಗೆ ಇವತ್ತಿನ ದಿವಸ ಬಹಳ ಅನುಕೂಲ ,ಮಾಡಿಕೊಡುತ್ತೇನೆ ಎಂದು ಹೇಳುವಂತಹ ಸಂದರ್ಭದಲ್ಲಿ ರೈತನಿಗೆ ಇಲ್ಲದೇ ಇರುವಂತಹ ಕಿರುಕುಳಕ್ಕೆ ಅವಕಾಶ ಮಾಡಿಕೊಂಟ್ಟಂಥ ವಿಚಾರ ಇದು. ಇವತ್ತು ಬಾಗೇಪಲ್ಲಿ ಗಡಿನಾಡ ಪ್ರದೇಶವಾಗಿರುವುದರಿಂದ ಅಲ್ಲಿನ ರೈತರು ಹಿಂದೂಪುರ, ಚಿಕ್ಕಬಳ್ಳಾಪುರ ಈ ಕಡೆಗೆ ಹೋಗಿ ಅವರು ಬೆಳೆದಿರುವಂತಹ ವಸ್ತುಗಳನ್ನು ಮಾರಾಟ ಮಾಡಲು ಅಲ್ಲಿಗೆ ತೆಗೆದುಕೊಂಡು ಹೋಗುವಂತಹ ಪರಿಸ್ಥಿತಿ ಬಂದಿದೆ. ಮತ್ತೆ ದಲ್ಲಾಳಿಗಳು ಕೂಡ ಹೆಚ್ಚಿಗೆ ಕಿರುಕುಳವನ್ನು ಅವರಿಗೆ ಕೊಟ್ಟು ಹೆಚ್ಚಿಗೆ ಕಮೀಷನ್ ಪಡೆಯುತ್ತಿರುವುಂತಹ ಸಂದರ್ಭದಲ್ಲಿ ಕೃಷಿ ಮಾರುಕಟ್ಟೆ ಪ್ರಾರಂಭ ಮಾಡಲಿಲ್ಲ. ಸುಮಾರು ಐದಾರು ವರ್ಷಗಳ ಹಿಂದೆ ಈ ಕೃಷಿ ಮಾರುಕಟ್ಟೆ ಪ್ರಾರಂಭ ಆಗಿದ್ದರೂ ಕೂಡ ಕೆಲವು ರಾಜಕೀಯ ಕಾರಣಗಳಿಂದ ಪ್ರಾರಂಭ ಮಾಡದೇ ಇವತ್ತು ನಮ್ಮ ರೈತರಿಗೆ ಅನಾನುಕೂಲ ಮಾಡಿಕೊಟ್ಟಿರುವಂತಹ ಸ್ಥಿತಿ ಇದೆ. ಈ ಕೃಷಿ ಇಲಾಖೆಯವರು, ಕೃಷಿ ಮಾರುಕಟ್ಟೆಯನ್ನು ಎಷ್ಟು ದಿವಸದೊಳಗೆ ಪ್ರಾರಂಭ ಮಾಡುತ್ತಾರೆ ಎಂದು ಒಂದು ನಿಗದಿಯಾದಂತಹ ಸಮಯವನ್ನು ನಮಗೆ ಕೊಡಬೇಕಾಗುತ್ತದೆ.

ಶ್ರೀ ಆರ್. ಬಿ.ತಿಮ್ಮಾಪುರ್ : ಮಾನ್ಯ ಅಧ್ಯಕ್ಷರೆ, ಬಾಗೇಪಲ್ಲಿಯಲ್ಲಿ ಮಾರುಕಟ್ಟೆಯನ್ನು ಅಭಿವೃದ್ಧಿಪಡಿಸಬೇಕು. ಅಲ್ಲಿ ಬೀದಿ ದೀಪವಾಗಲಿ, ಹರಾಜು ಕಟ್ಟೆಯಾಗಲಿ, ಒಳ ರಸ್ತೆಯಾಗಲೀ ಮೊದಲು ಇರಲಿಲ್ಲ. ಈಗ ಎಲ್ಲವನ್ನೂ ವ್ಯವಸ್ಥೆ ಮಾಡಲಾಗಿದೆ. ಇನ್ನು ಎರಡೇ ಎರಡು ತಿಂಗಳಲ್ಲಿ ಮಾರುಕಟ್ಟೆಯನ್ನು ಶಿಫ್ಟ್ ಮಾಡಿ ಅಲ್ಲಿ ಕೆಲಸ ಮಾಡಿಸುತ್ತೇವೆ.

ಅಧ್ಯಕ್ಷರು : ಎರಡು ತಿಂಗಳಲ್ಲೆ ಶಿಫ್ಟ್ ಮಾಡುತ್ತೇವೆಂದು ಹೇಳಿದ್ದಾರೆ.

ಶ್ರೀ ಎನ್. ಸಂಪಂಗಿ : ಎರಡೇ ತಿಂಗಳು ಎಂದರೆ ಎರಡು ತಿಂಗಳಲ್ಲಿ ಮಾಡುವುದಿಲ್ಲ. ಕೆಲವು ರಾಜಕೀಯ ಒತ್ತಡಗಳು ಇವೆ.

ಅಧ್ಯಕ್ಷರು : ಹೈಪಾಥೆಟಿಕಲ್ ಕ್ವೆಶ್ಚನ್ ಕೇಳಬೇಡಿ.

ಶ್ರೀ ಎನ್. ಸಂಪಂಗಿ : ಎರಡು ತಿಂಗಳಲ್ಲಿ ಮಾಡಿಕೊಟ್ಟರೆ ನಿಜವಾಗಿಯೂ ಅವರನ್ನು ಅಭಿನಂದಿಸುತ್ತೇನೆ.

ಶ್ರೀ ಆರ್. ಬಿ. ತಿಮ್ಮಾಪುರ್ : ಮಾನ್ಯ ಅಧ್ಯಕ್ಷರೆ, ಮಾನ್ಯ ಸಂಪಂಗಿ ಅವರು ಸಹಕಾರ ಕೊಟ್ಟರೆ ಎರಡೇ ತಿಂಗಳಲ್ಲಿ ನಾವು ಮುಗಿಸುತ್ತೇವೆ.

ಅಧ್ಯಕ್ಷರು : ಸಹಕಾರ ಕೊಡುತ್ತಾರೆ.

ಶೇಂದಿ ವನ ಒತ್ತುವರಿ ಮಾಡಿರುವುದು

112 (1044) ಶ್ರೀ ಕೃಷ್ಣಮೂರ್ತಿ ಕೆ.ಎಂ. (ಕಡೂರು) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಡೂರು ತಾಲ್ಲೂಕಿನಲ್ಲಿರುವ ಶೇಂದಿ ವನದಲ್ಲಿ ಒತ್ತುವರಿ ಮಾಡಿ ಬಡ ರೈತರು ತೆಂಗಿನಮರ ಮಾವಿನಮರ ಮುಂತಾದ ಬೆಳೆಗಳನ್ನು ಬೆಳೆದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಬಂದಿದ್ದಲ್ಲಿ ಸದರಿ ಒತ್ತುವರಿಯನ್ನು ಒತ್ತುವರಿದಾರರಿಗೆ ಕಾನೂನು ರೀತ್ಯಾ ಸಕ್ರಮಗೊಳಿಸಲು ಕ್ರಮ ಕೈಗೊಳ್ಳಲಾಗುವುದೇ? ಸಕ್ರಮಗೊಳಿಸಲು ಆದೇಶವನ್ನು ಯಾವಾಗ ಹೊರಡಿಸಲಾಗುವುದು;

ಇ) ಶೇಂದಿ ವನದ ವಿಸ್ತೀರ್ಣವೆಷ್ಟು; ಇದರಲ್ಲಿ ಎಷ್ಟು ಎಕರೆ ಒತ್ತುವರಿಯಾಗಿದೆ ; ಒತ್ತುವರಿ ಮಾಡಿದ ಜಾಗದಲ್ಲಿ ತೆಂಗಿನ ಮರ, ಮಾವಿನ ಮರಗಳ ವಯಸ್ಸು ಎಷ್ಟು?

ಶ್ರೀ ಹೆಚ್. ಸಿ ಶ್ರೀ ಕಂಠಯ್ಯ (ಕಂದಾಯ ಸಚಿವರು) :

ಅ) ಬಂದಿದೆ.

ಆ) ಸಕ್ರಮಗೊಳಿಸಲು ನಿಯಮಾವಳಿಗಲ್ಲಿ ಅವಕಾಶವಿರುವುದಿಲ್ಲ.

ಇ) ಶೇಂದಿ ವನದ ವಿಸ್ತೀರ್ಣ : 3449. 19 ಎಕರೆ ಒತ್ತುವರಿಯಾಗಿರುವ ವಿಸ್ತೀರ್ಣ : 3051. 31 ಎಕರೆ ಅಂದಾಜು ಮಾಡಲಾಗಿದೆ.

ತೆಂಗಿನ, ಮಾವಿನ ಮರದ ವಯಸ್ಸು ಅಂದಾಜು 10- 15 ವರ್ಷವಿರುತ್ತದೆ.

ಶ್ರೀ ಕೆ.ಎಂ. ಕೃಷ್ಣಮೂರ್ತಿ : ಮಾನ್ಯ ಅಧ್ಯಕ್ಷರೆ, ಒತ್ತುವರಿ ಮಾಡಿದ್ದಾರಾ ಎಂದು ಪ್ರಶ್ನೆ ಕೇಳಿದ್ದಕ್ಕೆ ಮಾನ್ಯ ಸಚಿವರು ಗಮನಕ್ಕೆ ಬಂದಿದೆ ಎಂದು ಹೇಳಿದ್ದಾರೆ. ಆದರೆ ಆ ಒತ್ತುವರಿ ಮಾಡಿರುವುದನ್ನು ಸಕ್ರಮಗೊಳಿಸುವುದಕ್ಕೆ ಸಾಧ್ಯವೇ ಎಂದು ಕೇಳಿದ್ದಕ್ಕೆ ಅವಕಾಶ ಇಲ್ಲ ಎಂದು ಹೇಳಿದ್ದಾರೆ. ನಾನು ಈ